# ಸಮಾಚಾರ ಸಮೀಕ್ಷೆ – ಜುಲೈ 2012

## ಭಾರತದ ಆರ್ಥಿಕ ಕುಸಿತಕ್ಕೆ ಹೊಣೆಗಾರರು – ಪ್ರಧಾನಿ ಸಿಂಗ್ ಮತ್ತು ಸೋನಿಯಾ

**ಸುದ್ದಿ:**

ನ್ಯೂಯಾರ್ಕ್‌ನ "ಸ್ಟಾಂಡರ್ಡ್ ಅಂಡ್ ಪೂರ್ಸ್" (Standard and Poor's ಅಥವಾ S&P) ಎಂಬ ಅಧ್ಯಯನ ಸಂಸ್ಥೆಯು ಭಾರತದ ಆರ್ಥಿಕ ಸ್ಥಿತಿಯ ಕುರಿತಾಗಿ ಅಧ್ಯಯನ ನಡೆಸಿ, ತನ್ನ ವರದಿಯನ್ನು ಪ್ರಕಟಿಸಿದೆ. ಅದು ತನ್ನ ವರದಿಯಲ್ಲಿ ಹೀಗೆ ಹೇಳಿದೆ: ಭಾರತದ ಆರ್ಥಿಕ ಸ್ಥಿತಿ ಆರೋಗ್ಯಕರವಾಗಿಲ್ಲ. ಅದು ನಿಧಾನವಾಗಿ ಆರ್ಥಿಕ ಅರಾಜಕತೆಯತ್ತ ಜಾರುತ್ತಿದೆ. ಇದಕ್ಕೆ ಪ್ರಮುಖ ಕಾರಣ, ಇಲ್ಲಿನ "ಚುನಾಯಿತರಲ್ಲದ ಪ್ರಧಾನಿ" ಮತ್ತು "ಹೊಣೆಗಾರಿಕೆಯಿಲ್ಲದೆ ಅಧಿಕಾರ ಕೇಂದ್ರೀಕರಿಸಿಕೊಂಡಿರುವ ಸೋನಿಯಾ".

**ಹಿನ್ನೆಲೆ:**

S&P ಸಂಸ್ಥೆಯು ನ್ಯೂಯಾರ್ಕಿನಲ್ಲಿರುವ ರಾಜಕೀಯೇತರ ಅಧ್ಯಯನ ಸಂಸ್ಥೆ. ಅದಕ್ಕೆ ಯಾವುದೇ ರಾಜಕೀಯ ಒಲವುಗಳಿಲ್ಲ ಮತ್ತು ಅದು ಕೇವಲ ವಸ್ತುನಿಷ್ಠ ಅಧ್ಯಯನಕ್ಕಾಗಿಯೇ ಬದ್ಧವಾಗಿರುವ ಸಂಸ್ಥೆಯಾಗಿದೆ. ಅದು ಜಗತ್ತಿನ ಎಲ್ಲ ದೇಶಗಳ ಕುರಿತಾಗಿ ಅಧ್ಯಯನ ನಡೆಸುತ್ತದೆ ಮತ್ತು ಅದರ ವರದಿಗಳಿಗೆ ಜಾಗತಿಕ ಮನ್ನಣೆಯಿದೆ. ಇತ್ತೀಚಿನ ತನ್ನ ಅಧ್ಯಯನದ ವರದಿಯಲ್ಲಿ ಅದು, ಭಾರತದಲ್ಲಿನ ಪ್ರಸ್ತುತ ಆರ್ಥಿಕ ಹಿನ್ನಡೆ ಮತ್ತು ಇದರಿಂದಾಗಿ ಆಗುತ್ತಿರುವ ಕುಸಿತಕ್ಕೆ ಕಾರಣವನ್ನು ವಿಶ್ಲೇಷಿಸಿದೆ. ಆ ವಿಶ್ಲೇಷಣೆಯ ಪ್ರಕಾರ ಇಲ್ಲಿರುವ ಆಡಳಿತ ವ್ಯವಸ್ಥೆಯೇ ಇದಕ್ಕೆಲ್ಲ ಪ್ರಮುಖ ಕಾರಣ. ಜನರಿಂದ ನೇರವಾಗಿ ಚುನಾಯಿತರಾಗದ, ಪಕ್ಷದ ಅಧ್ಯಕ್ಷರಿಂದ ನಿಯುಕ್ತರಾದ ವ್ಯಕ್ತಿ ಪ್ರಧಾನಿಯಾಗಿರುವುದು ಮತ್ತು ಯಾವುದೇ ಪ್ರಮುಖ ನಿರ್ಣಯಗಳನ್ನು ಅವರು ತೆಗೆದುಕೊಳ್ಳಲಾಗದ ಸ್ಥಿತಿಯಲ್ಲಿರುವುದು ಮೊದಲ ಪ್ರಮುಖ ಕಾರಣ. ಸಂವಿಧಾನಾತ್ಮಕವಾಗಿ ಯಾವುದೇ ಅಧಿಕಾರವಿಲ್ಲದೆಯೂ ಸಂಪೂರ್ಣ ಆಡಳಿತದ ಚುಕ್ಕಾಣಿಯನ್ನು ತನ್ನ ಕೈಯ್ಯಲ್ಲಿರಿಸಿಕೊಂಡಿರುವ ಶ್ರೀಮತಿ ಸೋನಿಯಾ ಗಾಂಧಿಯವರು ಎರಡನೆಯ ಪ್ರಮುಖ ಕಾರಣ.

**ವಿಶ್ಲೇಷಣೆ:**

1. ಈ ವರದಿ ಭಾರತದ ಪ್ರಸ್ತುತ ಸ್ಥಿತಿಯನ್ನು ಯಥಾವತ್ತಾಗಿ ಚಿತ್ರಿಸಿದೆ. ಭಾರತದಂತಹ ಬೃಹತ್ ಪ್ರಜಾಪ್ರಭುತ್ವವಾದಿ ದೇಶದಲ್ಲಿ ಜನರಿಂದ ನೇರವಾಗಿ ಚುನಾಯಿತಗೊಳ್ಳದೆ, ರಾಜಕೀಯ ಪಕ್ಷವೊಂದರ ಅಧ್ಯಕ್ಷರಿಂದ ನಿಯುಕ್ತರಾದವರು ಪ್ರಧಾನಮಂತ್ರಿಯಂತಹ ಮಹತ್ವದ ಸ್ಥಾನ ಗಳಿಸಿದ್ದಾರೆ ಎಂಬುದು ನಮ್ಮ ಪ್ರಜಾಪ್ರಭುತ್ವದ ಅಣಕವಾಗಿದೆ ಮತ್ತು ಇದು ಹಾಸ್ಯಾಸ್ಪದವೆನಿಸಿದೆ. ಇಂತಹ ವ್ಯಕ್ತಿ ಯಾವುದೇ ಪ್ರಮುಖ ವಿಷಯಕ್ಕೆ ಸಂಬಂಧಿಸಿದಂತೆ ಸ್ವಂತದ ನಿರ್ಣಯ ತೆಗೆದುಕೊಳ್ಳದೆ, ತನ್ನನ್ನು ನಿಯುಕ್ತಿಗೊಳಿಸಿರುವವರ ನಿರ್ಣಯಕ್ಕೆ ಬದ್ಧರಾಗಿ ಕೃತಜ್ಞತೆಯಿಂದ ವ್ಯವಹರಿಸುವುದು ಸಹಜವೇ ಆಗಿದೆ. ಹೀಗಾಗಿ ಆಡಳಿತವು ಅಪಮೌಲ್ಯಗೊಂಡಿದೆ ಮತ್ತು ಅವರ ವ್ಯಕ್ತಿತ್ವವೂ ಪ್ರತಿಷ್ಠೆ ಕಳೆದುಕೊಂಡು, ಅವರ ಮಾತಿಗೆ ಬೆಲೆಯೇ ಇಲ್ಲದಂತಾಗಿದೆ. ಮತ್ತೊಂದು ಕಡೆ, ಪ್ರತ್ಯಕ್ಷ ಅಧಿಕಾರ ಚಲಾಯಿಸುತ್ತಿರುವ ಸೋನಿಯಾ ಅವರಿಗೆ ಉತ್ತರದಾಯಿತ್ವ ಇಲ್ಲದಿರುವುದರಿಂದ, ಏನೇ ಪ್ರಮಾದವೆಸಗಿದರೂ ಅವರದಕ್ಕೆ ಹೊಣೆಗಾರರಾಗುವುದೇ ಇಲ್ಲ. ಇದರಿಂದಾಗಿ ಆಡಳಿತದಲ್ಲಿ "ಸಿಕ್ಕಿದವರಿಗೆ ಸೀರುಂಡೆ" ಎಂಬ ಸ್ಥಿತಿ, ಆರ್ಥಿಕ ಹಗರಣಗಳು, ಇತ್ಯಾದಿ ಎಗ್ಗಿಲ್ಲದೆ ಹೆಚ್ಚುತ್ತಿವೆ.
2. ಈ ವರದಿಗೆ ಸಂಬಂಧಿಸಿ ಕಾಂಗ್ರೆಸ್ ಖಾರವಾಗಿ ಪ್ರತಿಕ್ರಿಯಿಸಿದೆ. ಆದರೆ S&P ಒಂದು ಅಂತರರಾಷ್ಟ್ರೀಯ ಸ್ತರದ ಪ್ರತಿಷ್ಠಿತ ರಾಜಕೀಯೇತರ ಸಂಸ್ಥೆ. ಅದಕ್ಕೆ ಯಾವುದೇ ರಾಜಕೀಯದ ಒಲವುಗಳಿಲ್ಲ ಅಥವಾ ವಿರೋಧವೂ ಇಲ್ಲ. ಹೀಗಾಗಿ, ಕೇವಲ ಖಾರವಾಗಿ ಪ್ರತಿಕ್ರಿಯಿಸುವುದು "ಕೈಲಾಗದವನು ಮೈ ಪರಚಿಕೊಂಡ" ಎಂಬಂತಾಗುತ್ತದೆ. ಬದಲಾಗಿ ಈ ವರದಿಯಲ್ಲಿ ತಪ್ಪುಗಳಿದ್ದರೆ ಅಥವಾ ಅದರಲ್ಲಿ ಅಸತ್ಯದ ಸಂಗತಿಗಳಿದ್ದರೆ, ಅದನ್ನು ಸಾಕ್ಷ್ಯಾಧಾರ ಸಹಿತ ಬಹಿರಂಗಪಡಿಸಬೇಕು. ವರದಿಯಲ್ಲಿ ಹೇಳಿರುವಂತಹ, ನಮ್ಮ ಆಡಳಿತ ವ್ಯವಸ್ಥೆಯಲ್ಲಿನ ಹುಳುಕನ್ನು ಅಲ್ಲಗಳೆಯುವ ಎದೆಗಾರಿಕೆ ಸರಕಾರಕ್ಕೆ ಏಕಿಲ್ಲ?
3. ನಮ್ಮ ಸಂವಿಧಾನದ ಪ್ರಕಾರ ದೇಶದ ಪ್ರಧಾನಿಯೇ ಸರಕಾರದ ನೈಜ ಪ್ರತಿನಿಧಿ. ಆದರೆ, ಈಗ ನಮ್ಮ ಆಡಳಿತ ವಿಕೇಂದ್ರೀಯ (eccentric)ವಾಗಿದೆ. ಕಣ್ಣಿಗೆ ಕಾಣುವಂತೆ ಹೆಸರಿಗೊಬ್ಬ ದುರ್ಬಲ ಪ್ರಧಾನಿ ಮತ್ತು ಹೊಣೆಗಾರಿಕೆಯಿಲ್ಲದೆ, ತೆರೆಯ ಮರೆಯಲ್ಲಿದ್ದು ಸರ್ವಾಧಿಕಾರ ನಡೆಸುವಂತಹ, ಅತ್ಯಂತ ಪ್ರಭಾವಿಯಾಗಿರುವ ಇನ್ನೋರ್ವ ವ್ಯಕ್ತಿಯ ಕೈಗಳಲ್ಲಿ ಕೇಂದ್ರೀಕೃತವಾಗಿರುವ ಆಡಳಿತ. ಈ ವಿಕೃತ ಸ್ಥಿತಿಯೇ ನಮ್ಮೆಲ್ಲಾ ಆರ್ಥಿಕ ಹಾಗೂ ರಾಜಕೀಯ ಸಮಸ್ಯೆಗಳಿಗೆ ಕಾರಣವಾಗಿದೆ.

ಪ್ರಸ್ತುತ ಸಮಸ್ಯೆ ಸಂಕೀರ್ಣಗೊಳ್ಳಲು ಕಾರಣವೆಂದರೆ, ಸೋನಿಯಾ ಅವರು ಸ್ವತಃ ಪ್ರಧಾನಿಯಾಗಲು ಕಾನೂನಿನ ಪ್ರಕಾರ ಸಾಧ್ಯವಿಲ್ಲ ಹಾಗೂ ಅವರ ಅಂಕಿತಕ್ಕೊಳಗಾಗಿದ್ದು ವಿಶ್ವಾಸಕ್ಕೆ ಪಾತ್ರರಾಗಿರುವ ಪ್ರಧಾನಿಯಾಗಬಲ್ಲ ಬೇರೊಬ್ಬ ವ್ಯಕ್ತಿ ಕಾಂಗ್ರೆಸ್ಸಿನಲ್ಲಿಲ್ಲ. ಇದೇ ಸ್ಥಿತಿ ಮುಂದುವರೆದಲ್ಲಿ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳುತ್ತದೆ.

4. ಇದಕ್ಕಿರುವ ಏಕಮಾತ್ರ ಪರಿಹಾರವೆಂದರೆ, ಪ್ರಸ್ತುತ ವ್ಯವಸ್ಥೆಯನ್ನು ಧಿಕ್ಕರಿಸಿ "ನೀವು ಕೂಡಲೇ ತೊಲಗಿ" ಎಂಬಂತಹ ಸಾರ್ವಜನಿಕರ ಅಭಿಯಾನವೊಂದೇ! ಈ ಸ್ಥಾನದಲ್ಲಿ ರಾಷ್ಟ್ರೀಯವಾದಿ ಸರಕಾರ ಸ್ಥಾಪಿತಗೊಳ್ಳಬೇಕು; ಕಟ್ಟರ್ ಹಿಂದುತ್ವವಾದಿಯಾಗಿರುವ, ಶುದ್ಧ ಚಾರಿತ್ರ್ಯವನ್ನು ಹೊಂದಿರುವ ಮತ್ತು ದೂರದರ್ಶಿತ್ವ ಹೊಂದಿರುವ ವ್ಯಕ್ತಿ ಪ್ರಧಾನಿಯಾಗಬೇಕು.

## ಕೋಮು ಆಧಾರಿತ ಮೀಸಲಾತಿಯ ಬಗ್ಗೆ ಕೇಂದ್ರ ಸರಕಾರಕ್ಕೆ ಸರ್ವೋಚ್ಚ ನ್ಯಾಯಾಲಯದಿಂದ ಛೀಮಾರಿ

### ಸುದ್ದಿ:

ವಿವಿಧ ಹಿಂದುಳಿದ ವರ್ಗದವರಿಗಾಗಿ ವಿವಿಧ ಉದ್ಯೋಗ ಮತ್ತು ಹುದ್ದೆಗಳಲ್ಲಿ ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ದೊರಕುವ ಪ್ರವೇಶಗಳಲ್ಲಿ ಮೀಸಲಾಗಿರಿಸಿರುವ ಶೇಕಡಾ 27ರಲ್ಲಿ ಮುಸಲ್ಮಾನರಿಗೆ ಶೇಕಡಾ 4.5 ಭಾಗವನ್ನು ಒಳಮೀಸಲಾತಿಯಾಗಿ ಕಾದಿರಿಸಬೇಕೆಂಬ ಕೇಂದ್ರ ಸರಕಾರದ ಯೋಜನೆಯನ್ನು ಸರ್ವೋಚ್ಚ ನ್ಯಾಯಾಲಯವು, ಅದು ತರ್ಕ ಹಾಗೂ ನ್ಯಾಯ ಸಮ್ಮತವಲ್ಲ ಎಂದು ತಿಳಿಸಿ ಸಾರಾಸಗಟಾಗಿ ತಿರಸ್ಕರಿಸಿದೆ.

### ಹಿನ್ನೆಲೆ:

ಈ ಹಿಂದೆ ಆಂಧ್ರಪ್ರದೇಶದ ವಿಧಾನಸಭಾ ಚುನಾವಣೆಯಲ್ಲೂ ತೆಲಗುದೇಶಂ ಪಕ್ಷವನ್ನು ಸೋಲಿಸುವ ಸಲುವಾಗಿ ಮುಸಲ್ಮಾನರ ಸಗಟು ಮತಗಳನ್ನು ತಮ್ಮ ಬುಟ್ಟಿಯಲ್ಲಿ ಹಾಕಿಕೊಳ್ಳಲು ಕಾಂಗ್ರೆಸ್ಸಿನ ನೇತಾರರಾಗಿದ್ದ ರಾಜಶೇಖರ ರೆಡ್ಡಿಯವರು ಈ ಹುನ್ನಾರ ನಡೆಸಿದ್ದರು. ಚುನಾವಣೆಯಲ್ಲಿ ಅವರು ಗೆದ್ದು ಮುಸಲ್ಮಾನರಿಗೆ ಒಳಮೀಸಲಾತಿಯನ್ನು ಘೋಷಿಸಿದಾಗ ಆಂಧ್ರಪ್ರದೇಶದ ಉಚ್ಚ ನ್ಯಾಯಾಲಯವು ಅದರ ವಿರುದ್ಧ ತೀರ್ಪು ನೀಡಿತ್ತು. ಸರಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಮಾಡಿಕೊಂಡಿತು. ಈ ತೀರ್ಪು ಹೊರಬರುವ ಮೊದಲೇ ಸರಕಾರವು ದುರ್ಬಲ ವರ್ಗದವರ ಶೇಕಡಾ 27 ಮೀಸಲಾತಿಯಲ್ಲಿ ಶೇಕಡಾ 4.5 ಅಷ್ಟನ್ನು ಮುಸಲ್ಮಾನರಿಗೆ ಕೊಡಮಾಡಿತು. ಇದರ ವಿರುದ್ಧ ಓರ್ವ ಹಿಂದುಳಿದ ನಾಯಕರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದಾಗ, ನ್ಯಾಯಾಲಯವು ಸರಕಾರದ ಈ ಕ್ರಮವನ್ನು ತಿರಸ್ಕರಿಸಿ ತೀರ್ಪು ನೀಡಿತು.

ಈ ನಡುವೆ ಉತ್ತರಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪುನಃ – ಸ್ವತಃ ಕೇಂದ್ರ ಸರಕಾರದ ಕಾನೂನು ಮಂತ್ರಿಯ ಮೂಲಕ – ಮುಸಲ್ಮಾನರಿಗೆ ಶೇಕಡಾ 9ರಷ್ಟು ಮೀಸಲಾತಿ ನೀಡುವುದಾಗಿ ಆಮಿಷ ಒಡ್ಡಿತು. ಅದಕ್ಕೆ ಪ್ರತಿಯಾಗಿ ಸಮಾಜವಾದಿ ಪಕ್ಷ ತಾನು ಆಯ್ಕೆಯಾದರೆ ಶೇಕಡಾ 20ರಷ್ಟು ಮೀಸಲಾತಿ ನೀಡುವುದಾಗಿ ಘೋಷಿಸಿತು. ಒಟ್ಟಿನಲ್ಲಿ ಮುಸಲ್ಮಾನರ ಮತಗಳು ಹರಾಜಿಗಿಡಲ್ಪಟ್ಟವು. ಈಗ ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯವು ಮತ ಆಧಾರಿತ ಮೀಸಲಾತಿಯು ತರ್ಕ ಹಾಗೂ ನ್ಯಾಯಸಮ್ಮತವಲ್ಲ ಎಂದು ಅಂತಿಮ ತೀರ್ಪು ನೀಡಿದೆ.

### ವಿಶ್ಲೇಷಣೆ:

1. ಗಮನಿಸಬೇಕಾದ ಸಂಗತಿಯೆಂದರೆ, ಈ ವಿಷಯದಲ್ಲಿ ಮುಸಲ್ಮಾನ ಸಮಾಜ ಸ್ವತಃ ಬೇಡಿಕೆ ಒಡ್ಡಿಲ್ಲ; ಮೀಸಲಾತಿ ಇಲ್ಲದ ಕಾರಣಕ್ಕಾಗಿ ಅನ್ಯಾಯವಾಗುತ್ತಿದೆ ಎಂದೂ ಹೇಳಿಲ್ಲ. ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದ ನಂತರವೂ ಅದು ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ. ಅದರರ್ಥ, ಈ ವಿಷಯದಲ್ಲಿ ಆ ಸಮುದಾಯಕ್ಕೆ ವಿಶೇಷ ಆಸಕ್ತಿಯೇನೂ ಇಲ್ಲ. ಹೀಗಾಗಿ, ಕಾಂಗ್ರೆಸ್ ಪಕ್ಷವು ಸ್ವತಃ ಆಸಕ್ತಿ ವಹಿಸಿ ಈ ವಿಶೇಷ ಸವಲತ್ತು ಒದಗಿಸಲು ಮುಂದಾಗಿರುವುದು ಅವರ ಸಗಟು ಮತಗಳ ಮೇಲಿನ ದುರಾಸೆಯಿಂದಲ್ಲದೆ ಬೇರೇನೂ ಇಲ್ಲ.
2. ಇಂದು ದೇಶಾದ್ಯಂತ ಮುಸಲ್ಮಾನರು ನಡೆಸುತ್ತಿರುವ ತಾಂತ್ರಿಕ, ವೈದ್ಯಕೀಯ ಮತ್ತು ಇನ್ನಿತರ ಶೈಕ್ಷಣಿಕ ಸಂಸ್ಥೆಗಳಿವೆ. ಅವುಗಳು ಅಲ್ಪಸಂಖ್ಯಾತ ಸಂಸ್ಥೆಗಳೆಂಬ ಹೆಸರಿನಲ್ಲಿ ಸರಕಾರದಿಂದ ಅನೇಕ ರೀತಿಯ ವಿಶೇಷ ಸೌಲಭ್ಯಗಳನ್ನೂ ಮತ್ತು ಅನೇಕ ನಿಯಮಗಳಿಂದ ವಿನಾಯಿತಿಗಳನ್ನೂ ಪಡೆಯುತ್ತಿವೆ. ಆದರೆ, ಈ ಸಂಸ್ಥೆಗಳಲ್ಲಿನ ಸ್ಥಾನಗಳನ್ನು ತುಂಬಲು ಮುಸಲ್ಮಾನ ವಿದ್ಯಾರ್ಥಿಗಳ ಸಂಖ್ಯೆ ಸಾಕಾಗುತ್ತಿಲ್ಲ. ಇದಕ್ಕೆ ಪ್ರಮುಖ ಕಾರಣ, ಈ ರೀತಿಯ ಶಿಕ್ಷಣದಲ್ಲಿ ಮುಸಲ್ಮಾನರಿಗೆ

ಆಸಕ್ತಿಯಿಲ್ಲ. ಇದರಿಂದಾಗಿ, ಆ ಸಂಸ್ಥೆಗಳಲ್ಲಿನ ಸ್ಥಾನವನ್ನು ತುಂಬಲು ಬಹುಸಂಖ್ಯಾತ ಸಮಾಜದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಿವೆ.

ಇನ್ನು ಉದ್ಯೋಗ ಹಾಗೂ ಹುದ್ದೆಗಳಿಗೆ ಸಂಬಂಧಿಸಿದಂತೆ ಹೇಳುವುದಾದಲ್ಲಿ ಅರ್ಹತೆ ಇದ್ದೂ ಸಹ ಮುಸಲ್ಮಾನ ಎಂಬ ಕಾರಣಕ್ಕಾಗಿ ಅದು ನಿರಾಕರಿಸಲ್ಪಟ್ಟ ಉದಾಹರಣೆ ಇಲ್ಲ. ಅರ್ಹತೆ ಇಲ್ಲದ ಕಾರಣಕ್ಕಾಗಿ ಉದ್ಯೋಗ ಅಥವಾ ಹುದ್ದೆ ನಿರಾಕರಿಸಲ್ಪಟ್ಟಿದ್ದರೆ ಅದನ್ನು ತಪ್ಪೆನ್ನಲಾಗುವುದಿಲ್ಲ. ಮುಸಲ್ಮಾನರಾಗಿರುವುದೇ ಅರ್ಹತೆಯಾಗುವುದು ಸರಿಯೂ ಅಲ್ಲ, ಸಾಧುವೂ ಅಲ್ಲ.

3. ನಮ್ಮ ದೇಶದ ಅತ್ಯಂತ ಪ್ರಮುಖ ಹುದ್ದೆಗಳಾದ ರಾಷ್ಟ್ರಪತಿ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ, ಮುಖ್ಯ ಚುನಾವಣಾ ಆಯುಕ್ತ, ಇತ್ಯಾದಿ ಹುದ್ದೆಗಳನ್ನು ಮುಸಲ್ಮಾನರೂ ಅಲಂಕರಿಸಿದ್ದಾರೆ. ಹೀಗಾಗಿ, ಮುಸಲ್ಮಾನರಿಗೆ ಉನ್ನತ ಹುದ್ದೆಗಳು ಸಿಗುವುದಿಲ್ಲ ಎಂಬ ಮಾತುಗಳಲ್ಲಿ ಹುರುಳಿಲ್ಲ.

4. ನಮ್ಮ ದೇಶವನ್ನು ಅನೇಕ ಶತಮಾನಗಳ ಕಾಲ ಮುಸಲ್ಮಾನರೇ ಆಳಿದರು. ಆ ಕಾಲಾವಧಿಯಲ್ಲಿ ಹೆಚ್ಚಿನ ಸರಕಾರಿ ಹುದ್ದೆಗಳೆಲ್ಲಾ ಅವರದೇ ಆಗಿತ್ತು. ಸ್ವಾತಂತ್ರ್ಯಾನಂತರದ 60 ವರ್ಷಗಳ ಕಾಲ "ಮುಸಲ್ಮಾನರ ಕುರಿತಾಗಿ ವಿಶೇಷ ಕಾಳಜಿ ತೋರಿಸುತ್ತಿರುವ" ಕಾಂಗ್ರೆಸ್ ಮತ್ತು ಸಮಾನಮನಸ್ಕ ಪಕ್ಷಗಳೇ ದೇಶವನ್ನು ಆಳಿವೆ. ದೇಶದ ಆಡಳಿತದ ಮೇಲೆ ಇಷ್ಟೆಲ್ಲಾ ಪ್ರಭಾವ ಹೊಂದಿರುವ ಮುಸಲ್ಮಾನ ಸಮಾಜವು ಸ್ವಾತಂತ್ರ್ಯಾನಂತರದ ಕೆಲವೇ ದಶಕಗಳ ಕಾಲಾವಧಿಯಲ್ಲಿ ಹಿಂದುಳಿದ ಸಮಾಜವಾಗಲು ಹೇಗೆ ಸಾಧ್ಯ? ಹೀಗಿದ್ದಾಗ್ಯೂ ಅವರು ಇಂದು ಹಿಂದುಳಿದಿದ್ದಾರೆ ಎಂದರೆ, ಅದಕ್ಕೆ ಮತ್ತೇನೋ ಪ್ರಮುಖ ಕಾರಣವಿರಬೇಕು. ಅದನ್ನು ಸರಿಮಾಡದೆ, ಕೇವಲ ಮೀಸಲಾತಿ ನೀಡುವುದರಿಂದ ಆ ಸಮಾಜವನ್ನು ಮೇಲೆತ್ತಲು ಸಾಧ್ಯವಿಲ್ಲ.

5. ಈ ಹಿಂದೆ ನಮ್ಮ ಪ್ರಧಾನಿಯವರು, ದೇಶದ ಸಂಪನ್ಮೂಲಗಳಲ್ಲಿ ಪ್ರಥಮ ಅಧಿಕಾರ ಮುಸಲ್ಮಾನರಿಗೆ ಸೇರಬೇಕು ಎಂದಿದ್ದರು. ನಂತರ ಸಾಚಾರ್ ಆಯೋಗದ ಶಿಫಾರಸುಗಳಿಗೆ ಕಾರ್ಯರೂಪ ನೀಡಲು ಈ ವಿಶೇಷ ಮೀಸಲಾತಿ ನೀಡಲು ಈಗ ಪ್ರಯತ್ನಿಸಲಾಗುತ್ತಿದೆ. ಮುಖ್ಯವಾಗಿ ಮುಸಲ್ಮಾನ ಸಮಾಜ ತನ್ನಿಂದ ದೂರ ಸರಿಯುತ್ತಿದೆ ಎಂಬ ಅನುಭವವೇ ಕಾಂಗ್ರೆಸ್ಸಿಗೆ ಈಗ ತಲೆನೋವಾಗಿದೆ. ಆದರೆ, ಅವರ ಈ ಕ್ರಮವೂ ಮುಸಲ್ಮಾನರನ್ನು ತನ್ನತ್ತ ಸೆಳೆಯುತ್ತಿಲ್ಲ ಎಂಬುದು ಅವರಿಗೆ ಅರ್ಥವಾಗುತ್ತಿರುವ ಕಠೋರ ವಾಸ್ತವ. ಮುಸಲ್ಮಾನರನ್ನು ಕಾಂಗ್ರೆಸ್ಸು ತನ್ನ ರಾಜಕೀಯ ಆಟದ ದಾಳಗಳಾಗಿ ಬಳಸಲಾಗುತ್ತಿದೆಯೇ ವಿನಃ ಅವರ ಏಳ್ಗೆಯ ಪ್ರಾಮಾಣಿಕ ಕಾಳಜಿಯಿಂದಲ್ಲ ಎನ್ನುವುದು ಈಗ ಮುಸಲ್ಮಾನರಿಗೂ ಅರ್ಥವಾಗುತ್ತಿದೆ.

6. ನ್ಯಾಯಾಲಯಗಳು – ಉಚ್ಚ ಹಾಗೂ ಸರ್ವೋಚ್ಚ ಎರಡೂ ಸಹ – ಎರಡೆರಡು ಬಾರಿ ಛೀಮಾರಿ ಹಾಕಿದರೂ ಕಾಂಗ್ರೆಸ್ ಪಾಠ ಕಲಿತಿಲ್ಲ ಎಂಬುದೇ ಇಲ್ಲಿ ನಿಷ್ಕರ್ಷೆಯಾಗಿದೆ. ಸಂವಿಧಾನದ ತಿದ್ದುಪಡಿಯಾಗದೆ ಈ ಮೀಸಲಾತಿ ಜಾರಿಗೊಳಿಸಲು ಸಾಧ್ಯವಿಲ್ಲ. ಆದರೆ, ಅಂತಹ ತಿದ್ದುಪಡಿ ತರಲು ಬೇಕಾಗುವಂತಹ ಬಹುಮತ ಕಾಂಗ್ರೆಸ್ ಮತ್ತು ಅಂಗಪಕ್ಷಗಳಿಗಿಲ್ಲ. ಮಾತ್ರವಲ್ಲ, ಹೆಚ್ಚಿನ ರಾಜ್ಯ ಸರಕಾರಗಳು ಅಂತಹ ತಿದ್ದುಪಡಿಯನ್ನು ಖಂಡಿತ ಒಪ್ಪುವುದಿಲ್ಲ ಎಂಬುದು ಸಹ ಅಂಗೈ ಹುಣ್ಣಿನಷ್ಟು ಸ್ಪಷ್ಟವಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಮೀಸಲಾತಿಯ ಪ್ರಯತ್ನ ಕೇವಲ ಹುಂಬತನವಷ್ಟೇ ಅಲ್ಲ, ಮುಸಲ್ಮಾನರ ಪಾಲಿಗೆ ಕೇವಲ ಕಣ್ಣೊರೆಸುವ ತಂತ್ರ ಮಾತ್ರವಾಗಿದೆ ಎಂಬುದು ಸಹ ನಿಚ್ಚಳವಾಗಿದೆ.